Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

ಸಂಪುಟ 27 ಸಂಚಿಕೆ 67] ಶುಕ್ರವಾರ 31—12—43 [ಕಾಲಾಣೆ

ಫಿನ್‌ಲೆಂಡಿನಲ್ಲಿ ದಂಗೆಯೇ ?

ಇಂಡಿಯಾದಲ್ಲಿ ಯುದ್ಧ ಸಾಮಗ್ರಿ ಇಂದಿನ ವಾರ್ತೆ

ಫಿನ್‌ಲೆಂಡಿನಲ್ಲಿ ಜನರು ದಂಗೆ ಎದ್ದಿರುವರೆಂದು ಹೇಳಲಾಗಿದೆ.

ಬರ್ಮಾದಲ್ಲಿ ಬ್ರಿಟಿಷರ ಸ್ವಾಧೀನದಲ್ಲಿರುವ ಮಂಯೂರಿಡ್ಡನ್ನು ಜಪಾನೀಯರು ಧಾಳಿ ಮಾಡಿ ವಿಫಲರಾದರು.

ಬಿಸ್ಕೇ ಕೊಲ್ಲಿಯಲ್ಲಿ ಮತ್ತೊಂದು ಜರ್ಮನ್ ಡಿಸ್ಟ್ರಾಯರು ಮುಳುಗಿ ಸಲ್ಪಟ್ಟಿತು.

ಜರ್ಮನಿಯ ಯುದ್ಧ ನೌಕೆಯಾದ 'ಡಾಲ್‌ಮಾಟಿಯಾ' ವು ಯುಗೋಸ್ಲೋವಿಯಾ ಬಳಿ ಜಲಸಮಾಧಿಯಾಯಿತು.

ಕೊಚಿನ್ ಮಹಾರಾಜರು 'ಕೊಚಿನ್' ಎಂಬ ಹೊಸ ಯುದ್ಧ ಹಡಗನ್ನು ಭಾರತ ಸರಕಾರಕ್ಕೆ ದಾನ ಮಾಡಿದರು.

ಡಿಸೆಂಬರ್ ತಿಂಗಳಲ್ಲಿ ಅಮೇರಿಕಾದವರ ವಿಮಾನ ಉತ್ಪತ್ತಿ 9 ಸಾವಿರ. ಇದು ಸಾಲದಂತೆ.

ಅಮೇರಿಕಾದ ಫೈಲ್ವೆಯವರು ಮುಷ್ಕರ ಹಿಡಿಯುವದಿಲ್ಲವಂತೆ.

ಗ್ರೀಸ್ ದೇಶವನ್ನು ಜರ್ಮನರು ಆಕ್ರಮಿಸಿದ್ದರಿಂದ ಒಂದು ಲಕ್ಷಕ್ಕೆ ಪೂರಾ ಗ್ರೀಕ್ ಜನರು ಮನೆಮಠಗಳನ್ನು ತ್ಯಜಿಸಿ ಬೆಟ್ಟಗುಡ್ಡಗಳಲ್ಲಿ ವಾಸಮಾಡುವ ಸ್ಥಿತಿ ಬಂದಿರುತ್ತದೆ.

ಚಿಲಿಯಲ್ಲಿ ಸಭಕಾರಪನ್ನು ತಲೆಕೆಳಕು ಮಾಡುತ್ತಿರುವಂತೆ ಕಾಣಬರುತ್ತದೆ.

ಟ್ಯಾಂಕ್ ತಯಾರಿಕೆಗೆ ಹಲ್ಲಿಜ್ಜಲು

ಒಂದು ಟ್ಯಾಂಕನ್ನು ಮಾಡಲು ಒಂದು ನೂರು ಟನ್‌ಗಳಷ್ಟು ಕಲ್ಲಿದ್ದಲು ಬೇಕು.

ಮಿಟರಿ ಕೈಲಿ

ಅಮೇರಿಕಾದ ರೈಲ್ವೇ ಆಡಳಿತವು ಈಗ ಮಿಲಿಟರಿ ಕೈಯಲ್ಲಿರುವುದು.

ಹೆಚ್ಚು ಕಾರ್ಯ ನಡೆಸಬೇಕು

ಮಿತ್ರರು 1944 ರಲ್ಲಿ ಈಗಿರುವುದಕ್ಕಿಂತ ದ್ವಿಗುಣವಾಗಿ ಯುದ್ಧ ಮಾಡಿದರೆ ಜಯವು ಸುಲಭವೆಂದು ಅಮೇರಿಕಾದ ಯುದ್ಧ ಮಂತ್ರಿ ಹಲ್‌ರವರು ಹೇಳುವರು!

ನಿಕನ

ಶ್ರೀ ಸುಭಾಷಚಂದ್ರ ಬೋಸರ ತಾಯಿಯು ಕಳೆದ ಮಂಗಳವಾರ ರಾತ್ರಿ ಕಾಲವಾದರು.

ನಾಜಿಗಳ ಪಲಾಯನ

ಇಟಲಿಯಲ್ಲಿ ನಾಜಿಗಳು ಓರ್ಟೋಕ್ ನಗರವನ್ನು ಬಿಟ್ಟು ಓಡಿದರು.

೨ನೇ ರಂಗದಲ್ಲಿ ಫ್ರೆಂಚರು

ಯೂರೋಪು ಮೇಲಿನ ಎರಡನೇ ರಣರಂಗದಲ್ಲಿ ಫ್ರೆಂಚರ (ಡಿಗಾಲ್) ಸೇನೆಯು ಮಿತ್ರರನ್ನು ಕೂಡಿ ಯುದ್ಧ ಮಾಡುವುದಂತೆ.

ಹೆಚ್ಚಿ ಬೆಳೆ

ಈ ವರ್ಷ ಭಾರತದ ಭತ್ತದ ಬೆರೆ ಶೇಕಡ 16 ರಂತೆ ಹೆಚ್ಚಿದೆಯೆಂದು ಹೇಳಲಾಗಿದೆ.

ಏರ್ ಕ್ರಾಫ್ಟ್ ಕ್ಯಾರಿಯರ್

ಈಗ ಅಮೇರಿಕ ವಿಮಾನ ಇಲಾಖೆಯಲ್ಲಿ 42 ಏರ್ ಕ್ರಾಫ್ಟ್ ಕ್ಯಾರಿಯರ್ ನೌಕೆಗಳು ಕೆಲಸಮಾಡುತ್ತಿವೆ.

ಹೆಚ್ಚಾಗಿ ಉಪಯೋಗಿಸಿದ್ದಕ್ಕೆ

ಕಲ್ಕತ್ತಾದ 'ವಿಶ್ವಮಿತ್ರ' ಎಂಬ ದಿನಪತ್ರಿಕೆಯ ಮ್ಯಾನೇಜರಾದ ಬಾಬು ರಾವ್ ಮಿಶ್ರರವರು ಸಂರಕ್ಷಣೆಯ ಕಾಯಿದೆ ಪ್ರಕಾರ ಹಿಡಿಯಲ್ಪಟ್ಟರುವರು. ಗೊತ್ತುಪಡಿಸಿದ ಪ್ರಮಾಣಕ್ಕಿಂತ ಹೆಚ್ಚು ಕಾಗದಗಳನ್ನು ಉಪಯೋಗಿಸಿದುದೇ ಇವರ ಮೇಲಿನ ಆರೋಪ.

ಆಶ್ಚರ್ಯ !

ಬ್ರಿಟೆನ್ನಿನ ಹವಾಂಟಿನಲ್ಲಿ 79 ವರ್ಷ ದಿಂದ ನಡೆಯುತ್ತಿದ್ದ ಗಡಿಯಾರವು ಕ್ರಿಸ್‌ಮಸ್ ದಿವಸ ಮೂರಾವರ್ತಿ ನಿಂತುಹೋಯಿತು. 3 ಗಂಟೆಗಳ ತರುವಾಯ ಅದರ ದಾತನು ಕಾಲವಾದನು !

ರಷ್ಯಾದಲ್ಲಿ ನಾಜಿಗಳ ಅಪಜಯ

ರಷ್ಯಾದಲ್ಲಿ ರಷ್ಯ ಸೇನೆ ಜೆಟೋಮಿರ್ ಸಮೀಪಿಸುತ್ತಿದೆ. ಜರ್ಮನರು ಎಟೆಂಬ್‌ಸ್ಕಿ ತ್ಯಜಿಸುವಂತೆ ಕಾಣುತ್ತೆ. ಕೊರೊಪಿ ರಷ್ಯನರ ವಶವಾಯಿತು.

ಹಿಂದೂ ಮಹಾಸಭೆ

ಅಮೃತಸರ್ ಹಿಂದೂ ಮಹಾಸಭೆಯಲ್ಲಿ ಡಾ ಮುಕರ್ಜಿಯವರು 'ಅಮೆರಿಯವರನ್ನು ಓಡಿಸಿ ಭಾರತದ ಬಿಕ್ಕಟ್ಟು ಸಡಿಲವಾಗುವುದು ; ನಾಯಕರನ್ನು ಒಂದಾನದಿಂದ ಬಿಡಿಸಿ, ಅವರ ಸಂಗಡ ಸಂಧಾನವನ್ನು ಮಾಡಿ ; ದೇಶವು ವಿಭಾಗ ಮಾಡಲು ಒಪ್ಪುವುದಿಲ್ಲ, ಜಿನ್ನಾರವರು ಹೇಳುವಂತೆ ವಿಭಾಗಮಾಡುವುದಕ್ಕೆ ಕ್ಷಿಪ್ರವಾದಿಲ್ಲ'' ಎಂಬ ತರಾವುಗಳನ್ನು ಪ್ಯಾಸ್ ಮಾಡಿದರು.

ವಿಮಾನದಲ್ಲಿ ಎಷ್ಟು ಸಾಮಾನಿದೆ

ವಿಮಾನವೆಂದರೆ ದಪ್ಪನಾದ ಒಂದು ಯಂತ್ರವೆಂದುಕೊಂಡಿದ್ದರೆ ತಪ್ಪು. ಅದರಲ್ಲಿ ೭೦,೦೦೦ ವಿವಿಧ ಆಕಾರಗಳ ವಿವಿಧ ಸಾಮಾನುಗಳು, ಸೂಕ್ಷ್ಮ ಯಂತ್ರ ಭಾಗಗಳೂ ಇವೆ.

ಮತ್ತೆ ಯುದ್ಧವೇ?

ಇತ್ತೀಚೆಗೆ ಬರ್ಲಿನ್‌ನಿಂದ ಬಂದ ಒಬ್ಬ ಪದಿಶ್ಯಾನಿಕವೇತ್ತನು ಈರೀತಿ ಪ್ರಕಟಿಸುತ್ತಾನೆ; ''ನಾನು ಭೇಟಿ ಮಾಡಿದ್ದ ಕೆಲವರು ಜರ್ಮನ್ ಸೇನಾಧಿಪತಿಗಳು ಈ ಯುದ್ಧದಲ್ಲಿ ಜರ್ಮನಿಯು ಸೋತು ಹೋಯಿತೆಂದು ಭಾವಿಸುತ್ತಿದ್ದಾನೆ. ಆದರೂ ಈ ಯುದ್ಧದಲ್ಲಿ ಭಾವಿ ಪುನರ್ನಿರ್ಮಾಣಕ್ಕೆ ಬೇಕಾದ ಸೈನ್ಯವನ್ನೂ, ವಸ್ತು ಸಾಮಗ್ರಿಯನ್ನೂ ತಾವು ರಕ್ಷಿಸಿಕೊಳ್ಳಬಲ್ಲವೆಂದು ಸಹ ಅವರು ಅಭಿಪ್ರಾಯಪಡುತ್ತಿದ್ದಾರೆ. ಇನ್ನು ೨೫ ವರ್ಷಗಳಲ್ಲಿ ಮತ್ತೆ ಯುದ್ಧವು ಪ್ರಾಪ್ತವಾಗುವುದೆಂದು ಅವರಲ್ಲಿ ಅನೇಕರ ಅಭಿಪ್ರಾಯವಾಗಿದೆ''.

ಜರ್ಮನರ ಯುದ್ಧದ ಖರ್ಚು

ಜರ್ಮನ್ ರೆವಿನ್ಯೂ ಶಾಖಾಧಿಕಾರಿಯಾದ ಡಾ || ಒಟೋ ಸ್ಟಾಡ್‌ರವರು ಕಳೆದ ನಾಲ್ಕು ಸಂವತ್ಸರಗಳ ಯುದ್ಧದಲ್ಲಿ ಜರ್ಮನ್ ಸರಕಾರವು 36700 ಕೋಟಿ ಮಾರ್ಕುಗಳನ್ನು ವೆಚ್ಚಮಾಡಿದೆಯೆಂದು ತಿಳಿಸಿದಂತೆ ಜರ್ಮನ್ ಓವರ್‌ಸೀಸ್ ರೇಡಿಯೋ ಪ್ರಕಟಿಸಿದೆ.

.... ಪ್ರತಿ ದಿನ 2 ಆಟಗಳು ....
೧ನೇ ಆಟ ೬-೩೦ ಕ್ಕೆ — ೨ನೇ ಆಟ ೧೦ ಕ್ಕೆ
ತಾ || 1, 2 ನೆ ಜನವರಿ ಶನಿವಾರ ಭಾನುವಾರ 3 ಆಟಗಳು
3-30, 6-30, ಮತ್ತು 10-30 — 3-30 ರ ಆಟವು ಸ್ತ್ರೀಯರಿಗೆ ಮಾತ್ರ
43 ವರ್ಷಗಳಿಂದ ಹೆಸರುವಾಸಿಪಡೆಯುತ್ತಾ ಒಂದಿರುವ
ಭಾಂಬೆ ಜಿ. ಎ. ಸರ್ಕಸ್
(ಸ್ಥಾಪನೆ 1901)
ಸ್ಥಳ — ಜೀವಣ್ಣರಾಯನಕಟ್ಟೆ, ಮೈಸೂರು
೧೦೦ ಆಟಗಾರರು, ೧೦೦ ಮೃಗಗಳು, ೪೪ ಸ್ತ್ರೀಯರ ಜಮ್ನಾಸ್ಟಿಕ್
ಡ್ಯಾನ್ಸನ್ನುನೋಡಲು ಮರೆಯಬೇಡಿ
ಜೀವದ ಮೊಸಳನ್ನು ನುಂಗಿ, ಅದರಮೇಲೆ 2 ಕೊಡ ನೀರನ್ನು ಕುಡಿದುಹೊಟ್ಟೆಯಲ್ಲಿರಿಸಿಕೊಂಡು, ನಂತರ ಜೀವಸಹಿತವಾಗಿ ನೀರನ್ನೂ ಹೊರಗೆ ಪೂರಾ ತೆಗೆಯುವ ಅದ್ಭುತ ಸಾಹಸವನ್ನು ತಪ್ಪದೇ ನೋಡಿರಿ
— ಫ್ಲೈಯಿಂಗ್ ಟ್ರಪೀಸ್ ಆಟವನ್ನು ಜರೂರು ನೋಡಿರಿ. —

ಭಾರತೀಯ
ಹಡಗು ನಡೆಸುವವರು

ಭಾರತೀಯ ಹಡಗು ನಡೆಸುವವರು ತೋರಿಸುವ ಧೈರ್ಯಶೌರ್ಯವು ಲೋಕ ವಿಖ್ಯಾತವಾಗಿದೆ. ಭಾರತದ ಎರಡು ಲಕ್ಷ ನಾವಿಕರು ತಮ್ಮ ವಂಶದ ಕಸುಬನ್ನು ಮಾಡಿಕೊಂಡಿರುವರು. ಪ್ರಪಂಚದ ನಾವಿಕರಲ್ಲಿ ಭಾರತೀಯ ನಾವಿಕರಿಗೆ 4 ನೇ ಸ್ಥಾನವಿದೆ ಭಾರತದ 59 ಸಾವಿರ ನಾವಿಕರಲ್ಲಿ 49 ಸಾವಿರಕ್ಕೆ ಮೀರಿ ಬ್ರಿಟಿಷ್ ನೌಕೆಯಲ್ಲಿ ಕೆಲಸ ಮಾಡುತ್ತಿರುವರು. ಭಾರತೀಯ ನಾವಿಕರ ಸಂಬಳ ತೀರ ಕಮ್ಮಿ. ಈಚೆಗೆ ಅಂದರೆ 3 ವರ್ಷಗಳ ಕೆಳಗೆ ಸ್ವಲ್ಪ ಸಂಬಳ ಹೆಚ್ಚಿಸಲಾಯಿತು. ಆದರೇನು ? ಜಾತಿ ಬಣ್ಣ ಇವೆಯಲ್ಲಾ. ಮಂತ್ರಿ ಅಮೆರಿಯವರು ಜಾತಿಯ ಮೇಲಲ್ಲ, ಕೆಲಸ ನೋಡಿ ಸಂಬಳ ಕೊಡುತ್ತಾರೆಂದು ಹೇಳಲಾಗಿದೆ.

ಒಬ್ಬ ಬ್ರಿಟಿಷ್ ಫೈರ್‌ಮೆನ್ನಿಗೆ ತಿಂಗಳಿಗೆ ಪೌಂಡು 10.2-6, ಭಾರತೀಯರಿಗೆ ಪೌಂಡು 2-2-6. ಬ್ರಿಟಿಷ್ ನಾವಿಕರಿಗೆ ತಿಂಗಳಿಗೆ ಪೌಂಡು 9-12-6 ಭಾರತೀಯರಿಗೆ ಪೌಂಡು 2-2-6 . ಬ್ರಿಟಿಷರ ಹೇಳುವುದು ಬ್ರಿಟಿಷರು ಜೆನ್ನಾಗಿ ಕೆಲಸ ಮಾಡುತ್ತಾರೆಂದು. ಭಾರತ ಸರ್ಕಾರದ ಸರ್ ಜೆಫ್ರಿಗಾಂಬರ್ಟರವರು ಭಾರತೀಯರಿಗಿಂತ ಬ್ರಿಟಿಷರು ಎರಡರಷ್ಟು ಚಟುವಟಿಕೆಯುಳ್ಳವರು ಎಂದು ಹೇಳುವರು. ಇದನ್ನು ನಾವು ಅನುಮೋದಿಸದಿದ್ದರೂ ಒಂದಕ್ಕೆ ಎರಡರಷ್ಟು ಒದಲು ನಾಲ್ಕು ರಷ್ಟು ವಿತಕ್ಕೆ ಕೊಡಬೇಕು ? ನಿವೃತ್ತ ನೌಕಾ ಮಾಸ್ತರು ಮಿ || ಕರಿಯವರು ವಿಟ್ಲೆ ಕಮಿಷನ್ನಿನಲ್ಲಿ, ಭಾರತೀಯ ನಾವಿಕರು ಬ್ರಿಟಿಷ್ ನಾವಿಕರಿಗೆ ಸರಿ ಸಮಾನರೆಂದು ಹೇಳಿರುವರು. ಹೀಗಿರುವಾಗ ಮಿ || ಅಮೆರಿಯವರು ಈ ರೀತಿ ಹೇಳುವುದು ಆಶ್ಚರ್ಯಕರವಾಗಿದೆ. ಹಡಗಿನಲ್ಲಿ ಭಾರತೀಯ ನೌಕರರಿಗೆ 12 ಘನ ಅಡಿ ವಸತಿ ಕೊಡುವರು. ಅದೇ ಕೆಲಸದ ಬ್ರಿಟಿಷ್ ಕೆಲಸಗಾರರಿಗೆ 72 ಘನ ಅಡಿ ವಸತಿ ಕೊಟ್ಟಿರುತ್ತಾರೆ. ಅಲ್ಲದೆ ಬ್ರಿಟಿಷ್ ಕೆಲಸಗಾರನ ಕೊಠಡಿಯಲ್ಲಿ ಒಳ್ಳೇ ಗಾಳಿ ಬೆಳಕು ಒರುವಂತೆ ಮಾಡಿರುವರು. ತಿನ್ನಲಿಕ್ಕೆ ಹಣ್ಣು, ಹೊಸ ವಿಾನು ಕೊಡುತ್ತಾರೆ. ಭಾರತೀಯರಿಗೆ ಹಣ್ಣಿಲ್ಲ ಒಣಗಿದ ವಿಾನು. ಭಾರತೀಯನಿಗೆ ಹೊತ್ತಿಗೆ ಸರಿಯಾಗಿ ಅನ್ನಾಹಾರವುದಿಲ್ಲ. ಕೆಲಸ ಮಾಡಿ ಬಂದನಂತರವೇ ಊಟ, ಅದೂ ಹಳಸಿದ ತಂಗಳ ಊಟ. ಭಾರತೀಯನಿಗೆ ಕೊಟ್ಟ ತುಪ್ಪ 193 ಕಡೆಗಳಲ್ಲಿ ಪರೀಕ್ಷೆ ಮಾಡಿದ್ದಲ್ಲಿ ' ಮನುಷ್ಯ ತಿನ್ನುವ ತುಪ್ಪವಲ್ಲ ' ಎಂದು ಹೇಳಲಾಗಿದೆ. ಭಾರತೀಯ ನಾವಿಕರ ಯೋಗಕ್ಷೇಮಕ್ಕೆ ಇನ್ನು ಮುಂದೆಯಾದರೂ ಹೆಚ್ಚು ಗಮನ ಕೊಡುವರೆಂದು ನಂಬಲಾಗಿದೆ.

—

ಯಾರು ಕೇಳುವುದು ಸರಿ !

ಈ ವಾರದಲ್ಲಿ ನಡೆಯುವ ಮುಸ್ಲಿಂ ಲೀಗಿನ ಸಮ್ಮೇಳನದಲ್ಲಿ ಬೆಲೂಚಿಸ್ಥಾನವನ್ನು ಸಿಂಧ್ ಪ್ರಾಂತ್ಯಕ್ಕೆ ಜೋಡಿಸಬೇಕೆಂಬುವ ನಿರ್ಣಯವೊಂದಿದೆ. ತದ್ವಿರುದ್ಧವಾಗಿ ಅಮೃತಸರದಲ್ಲಿ ನಡೆಯುವ ಹಿಂದೂ ಮಹಾಸಭೆಯಲ್ಲಿ, ಸಿಂಧ್ ನಲ್ಲಿ ಹಿಂದೂಗಳು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುವುದರಿಂದ ಸಿಂಧ್ ಪ್ರಾಂತ್ಯವನ್ನು ತಿರುಗಿ ಬೊಂಬಾಯಿ ಪ್ರಾಂತ್ಯಕ್ಕೆ ಮೊದಲು ಇದ್ದಹಾಗೆ ಸೇರಿಸಬೇಕೆಂಬ ನಿರ್ಣಯವೊಂದು ಚರ್ಚೆಗೆ ಒರತೆಕ್ಕದ್ದಾಗಿದೆ. (ನ)

ಚಲಚಿತ್ರ ಕೈಗಾರಿಕೆ
ಜಗತ್ತಿನಲ್ಲಿ ಜಪಾನಿಗೆ ದ್ವಿತೀಯ ಸ್ಥಾನ

ಚಲನಚ್ಚಿತ್ರ ಕೈಗಾರಿಕೆಯಲ್ಲಿ ಜಪಾನು, ಜಗತ್ತಿನ ಚಲಚ್ಚಿತ್ರ ಕೇಂದ್ರಗಳಲ್ಲಿ ದ್ವಿತೀಯ ಸ್ಥಾನಪಡೆಯುತ್ತದೆ. ಚಲಚ್ಚಿತ್ರ ಉದ್ಯಮದ ವಿಷಯದಲ್ಲಿ ಇತ್ತೀಚೆಗೆ ಹೊರಟು ಬಂದು ಪ್ರಕಟಣೆಯಿಂದ, ಜಪಾನಿನ ಚಲಚ್ಚಿತ್ರೋದ್ಯಮ ಪ್ರಗತಿಯ ಕುರಿತಾದ ಕೆಲವು ಅಂಕೆಸಂಖ್ಯೆಗಳು ಪ್ರಕಟವಾಗಿವೆ.

ಸನ್ ೧೯೩೯ನೇ ಇಸವಿಯಲ್ಲಿ ಜಪಾನಿನಲ್ಲಿ ೫೮೪ ಚಿತ್ರಗಳು ತಯಾರಾದುವು. ಇವುಗಳಲ್ಲಿ ೩೬೫ ಚಿತ್ರಗಳು ಧ್ವನಿಯುಕ್ತವಾದುವು. (೧೯೩೫ರಲ್ಲಿ ೩೦೦ ಚಿತ್ರಗಳು ಮಾತ್ರ ಧ್ವನಿಯುಕ್ತವಾಗಿದ್ದುವು.)

ಜಪಾನಿನಲ್ಲಿ ೧೯೩೯ರಲ್ಲಿದ್ದ ಸಿನೆಮಾ ಗೃಹಗಳು ೨೦೯೭. ಈ ಸಂಖ್ಯೆ ಬೆಳೆಯುತ್ತಲೇ ಇದೆ.

ತಮ್ಮ ಚಿತ್ರಗಳು ಜಪಾನಿನೊಳಗೆ ಮಾತ್ರವಲ್ಲ, ಜಗತ್ತಿನ ಎಲ್ಲಾ ದೇಶಗಳಲ್ಲಿ ಪ್ರದರ್ಶಿಸಲ್ಪಡಬೇಕೆಂದು ಜಪಾನಿಗಳ ಆತ್ಮವಿಶ್ವಾಸ ತೋರುತ್ತದೆ. ಅದರೆ, ಒರೆ ಜಪಾನೀ ಮುಖಗಳನ್ನು ಮಾತ್ರ ಕಂಡರೆ ಜಗತ್ತಿಗೆ ಜೆನ್ನಾಗಿ ತಿಳಿದಿದೆ. ಆದಕ್ಕಾಗಿ, ೧೯೩೯ರಿಂದಿತ್ತ ಜಪಾನು ಸಾಲ್ಜಿಮಾತ್ಯರೀತಿಯ ಮುಖಗಳುಳ್ಳ ಜಪಾನೀ ನಟೀನಟರನ್ನು ನೇಮಿಸಿ ತರಬೇತಿಯನ್ನು ಕೊಡುತ್ತಿದ್ದಾರೆ. ಕೆಲವು ಚಿತ್ರಗಳಲ್ಲಿ ಯುರೋಪಿಯ ಹಾಗೂ ಅಮೇರಿಕನ್ ವರ್ಣವಿದ್ದಂತೆ ಕಂಡುಬಂದಿದೆ

ಟೊಕಿಯೋದಲ್ಲಿ, ಇಂತಹ ಚಿತ್ರಗಳನ್ನು ಚೀನಿ ಹಾಗೂ ಕೆಲವು ಯುರೋಪೀಯ ಭಾಷೆಗಳಲ್ಲಿ ತಯಾರಿಸುವರು. (ಪ್ರ)

ಮೈಸೂರಿನಲ್ಲಿ ದನ ಸಂಹಾರ

ಮೈಸೂರು ಜಿಲ್ಲಾ ಡಿಪ್ಟೀ ಕಮಿಷನರ ಕೃಪೆಯಿಂದ ಈಚೆಗೆ ೭೦ ಹಾಲು ಕೊಡುವ ದನಗಳು ಕಟುಕರ ಪಾಲಾಗುತ್ತಿದ್ದುದು ತಪ್ಪಿತು. ಬೆಂಗಳೂರಿನಲ್ಲಿ ನಂಜನಗೂಡಿಗೆ ಮಿಲಿಟರಿಯವರಿಗೋಸ್ಕರ ಸಾಗಿಸಲು 200 ಕರೆಯುವ, 10 ವರ್ಷದೊಳಗಿರುವ ಹಸುಗಳು ಮಿ || ಹೆಚ್. ಬಿ. ಗುಂಡಪ್ಪಗೌಡರು ಮುಂತಾದವರ ಕೃಪೆಯಿಂದ ಜೀವದಾನ ಪಡೆದವು. ಈಚೆಗೆ ಗುಂಡ್ಲುಪೇಟೆ ಒಳಿಮತ್ತೊಂದು ದನಗಳ ಹಿಂಡನ್ನು ಕಟುಕರ ಬಾಯಿಗೆ ಬೀಳದಹಾಗೆ ತಪ್ಪಿಸಲಾಯಿತು. ಇವರೆಲ್ಲಾ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಮೇರೆ ವಿಚಾರಣೆಗೆ ಗುರಿಯಾಗಿರುತ್ತಾರೆ. ಇದಕ್ಕೋಸ್ಕರವೇ ರೂಪಾಯಿಗೆ ಒಂದೂಕಾಲು ಸೇರು ಬೆಣ್ಣೆ, ಮೂರು ಸೇರು ಹಾಲು !

—

ಮಿ || ರೂಸ್ವೆಲ್ಟರು ಎರಡನೇ ರಣರಂಗದ ನಾಯಕರನ್ನು ನೇಮಿಸುತ್ತಲೇ ಇದ್ದಾರೆ.

Lakshminarasimha PRESS
Artistic & Colour Printing
a Sspciality
Srirampet, Mysore

Visit—
Sastry's Coffee Rooms
Chamarajapuram
Mysore

Ranjit — Najma
4 ನೇ ಅಮೋಘ ವಾರ
ರಣಜಿತ್ ಟಾಕೀಸ್
ಅಶೋಕ ಕುಮಾರ್
ವೀಣಾ — ಸಿತಾರ
ಕುಮಾರ್ — ಯಾಕೂಬ್
ಮುಂತಾದವರು ಪಾತ್ರವಹಿಸಿರುವ
ನಲ
ಅಮೋಘ ಹಿಂದಿ ಚಿತ್ರ
ಪ್ರತಿ ದಿನ 3 ಆಟಗಳು

Opera — — Bhaktaraj
— ಆಪೆರಾದಲ್ಲಿ —
ಗೆಲುವಿನ 2 ನೇ ವಾರ
"ಭಕ್ತರಾಜ್"
ಅಮೋಘ ಹಿಂದೀ ಚಿತ್ರ
ವಿಷ್ಣುಪಂತ್ ಪಾಗ್ನೀಸ್
ವಾಸಂತಿ, ದೀಕ್ಷಿತ್- ಮುಬಾರಕ್
ಕಾಂತಿಲಾಲ್, ಬಿಲಿನೋರಿಯಾ
— ಮುಂತಾದವರು ಪಾತ್ರವಹಿಸಿರುವರು
ಪ್ರತಿ ದಿನ 3 ಆಟಗಳು
ಕಡೇ 2 ತರಗತಿಗಳು 0-5-0, 0-3-0
ಇತರ ತರಗತಿಗಳು ಎಂದಿನಂತೆ.

—ಶಕ್ತಿನು ಧಾ—
ದೇಹದೌರ್ಬಲ್ಯ ಬಲಹೀನತೆ ಇವಗಳನ್ನು
ಹೋಗಲಾಡಿಸಿ ವೀರ್ಯಾಭಿವೃದ್ಧಿ ಮಾಡಿ
ದೇಹಕ್ಕೆ ಕಾಂತಿಯನ್ನು ಉಂಟುಮಾಡುತ್ತೆ
ಈಗಲೇ ಕೊಂಡು ಉಪಯೋಗಿಸಿರಿ!
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.
೧೦೬೭, ಚಾಮರಾಜಪುರಂ ಮೈಸೂರು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.